Shri K.A.Lokapur Arts,Sci & Comm.College
J.E.Society
ATHANI
591304
Dt:Belagavi

# ಕರ್ನಾಟಕ ಸರ್ಕಾರ

ಕ್ರಮಾಂಕ: ಇಡಿ 93 ಯುಕೆವಿ 2004

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹು ಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:09-07-2004.

ಇಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿ, (ಉನ್ನತ ಶಿಕ್ಷಣ)
ಶಿಕ್ಷಣ ಇಲಾಖೆ,
ಬೆಂಗಳೂರು.

ಇವರಿಗೆ:

ಕುಲಸಚಿವರು,
ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ-580 003.

ಮಾನ್ಯರೇ,

ವಿಷಯ: ಅಥಣಿಯ ಜಾಧವಜಿ ಎಜುಕೇಷನ್ ಸೊಸೈಟಿಯ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯಕ್ಕೆ ಸಂಯೋಜನೆ ನೀಡುವ ಬಗ್ಗೆ.

ಉಲ್ಲೇಖ: (1) ದಿನಾಂಕ: 31-03-2004 ಸಂ:ಕವಿವಿ/ವಿಮ/ಸಂಯೋಜನೆ/2003-2004/ 4764ರ ನಿಮ್ಮ ಪತ್ರ.

(2) ದಿನಾಂಕ:09-07-2004ರಂದು ಬರೆದುಕೊಟ್ಟ ಮಧ್ಯಂತರ ಒಪ್ಪಂದದ ಪತ್ರ.

*****

1) ಅಥಣಿಯ ಜಾಧವಜಿ ಎಜುಕೇಷನ್ ಸೊಸೈಟಿಯು ಅಥಣಿಯಲ್ಲಿ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯವನ್ನು 2004-2005ನೇ ಶೈಕ್ಷಣಿಕ ಸಾಲಿನಿಂದ ಸ್ಥಾಪಿಸಲು ಉದ್ದೇಶಿಸಿರುವ ಪ್ರಸ್ತಾವನೆಯನ್ನು ನಿಮ್ಮ ವಿಶ್ವವಿದ್ಯಾಲಯದ ಸ್ಥಳೀಯ ವಿಚಾರಣಾ ಸಮಿತಿಯ ವರದಿಯನ್ನಾಧರಿಸಿ ಶೈಕ್ಷಣಿಕ ಪರಿಷತ್ತು ಮತ್ತು ಸಿಂಡಿಕೇಟುಗಳು ವಿಶ್ಲೇಷಿಸಿ ಮಾಡಿರುವ ಶಿಫಾರಸ್ಸಿನ ಬೆಳಕಿನಲ್ಲಿ ಸಂವೀಕ್ಷಿಸಲಾಗಿದೆ.

2) 2000ದ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮದ 59ನೇ ಪ್ರಕರಣದ (11)ನೇ ಉಪ ಪ್ರಕರಣದಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಅಥಣಿಯ ಜಾಧವಜಿ ಎಜುಕೇಷನ್ ಸೊಸೈಟಿಯು ವತಿಯಿಂದ ಅಥಣಿಯಲ್ಲಿ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜಿಗೆ ಈ ಕೆಳಕಂಡ ಕೋರ್ಸುಗಳು ಹಾಗೂ ವಿದ್ಯಾರ್ಥಿ ಪ್ರಮಾಣದೊಂದಿಗೆ ಪ್ರಸಕ್ತ 2004-2005ನೇ ಸಾಲಿನಿಂದ ಸಂಯೋಜನೆಯನ್ನು ಮಂಜೂರು ಮಾಡುವಂತೆ ಶಿಫಾರಸ್ಸು ಮಾಡಲು ನಾನು ನಿರ್ದೇಶಿತನಾಗಿದ್ದೇನೆ.

| ಕ್ರ. ಸಂ. | ಕೋರ್ಸು | ಭಾಷೆಗಳು | ವಿಷಯಗಳು | ವಿದ್ಯಾರ್ಥಿ ಪ್ರಮಾಣ |
|---|---|---|---|---|
| 1 | ಬಿ.ಎ (ಭಾಗ-1) | ಇಂಗ್ಲೀಷ್, ಹಿಂದಿ, ಕನ್ನಡ | 1. ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಭೂಗೋಳಶಾಸ್ತ್ರ<br>2. ಇತಿಹಾಸ, ಕನ್ನಡ, ಸಮಾಜಶಾಸ್ತ್ರ/ ಇಂಗ್ಲೀಷ್ | 120 (ನೂರ ಇಪ್ಪತ್ತು) |

Scanned with OKEN Scanner

| | | | | |
|---|---|---|---|---|
| 2 | ಬಿ.ಎಸ್ಸಿ (ಭಾಗ-1) | ಇಂಗ್ಲೀಷ್, ಹಿಂದಿ, ಕನ್ನಡ | 1. ಭೌತಶಾಸ್ತ್ರ, ರಸಾಯನಶಾಸ್ತ್ರ, ಪ್ರಾಣಿಶಾಸ್ತ್ರ/ಬಯೋಟೆಕ್ 2. ಕಂಪ್ಯೂಟರ್ ಸೈನ್ಸ್, ಎಲೆಕ್ಟ್ರಾನಿಕ್ಸ್, ಸಸ್ಯಶಾಸ್ತ್ರ/ ಗಣಿತ | 80 (ಎಂಬತ್ತು) |
| 3 | ಬಿ.ಕಾಂ (ಭಾಗ-1) | ಇಂಗ್ಲೀಷ್, ಹಿಂದಿ, ಕನ್ನಡ | ವಿಶ್ವವಿದ್ಯಾಲಯದ ಪರಿನಿಯಮಾವಳಿಯಂತೆ | 120 (ನೂರ ಇಪ್ಪತ್ತು) |

3) ಮೇಲ್ಕಂಡ ಸಂಯೋಜನೆಯು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟಿರುತ್ತದೆ.

ಷರತ್ತುಗಳು:-

(1) ಕಾಲೇಜುಗಳಿಗೆ ಅನ್ವಯವಾಗುವ ಅನುದಾನ ಸಂಹಿತೆಯಲ್ಲಿ ಯಾವುದೇ ಉಪಬಂಧಗಳಿದ್ದರೂ ಮೇಲ್ಕಂಡ ಕಾಲೇಜಿಗೆ ಸರ್ಕಾರವು ಯಾವುದೇ ಅನುದಾನವನ್ನು ಮಂಜೂರು ಮಾಡುವುದಿಲ್ಲ. ಅದು ಶಾಶ್ವತ ಅನುದಾನರಹಿತ ಕಾಲೇಜೆಂದು ಪರಿಗಣಿಸತಕ್ಕದ್ದು.

(2) ಜಾರಿಯಲ್ಲಿರುವ ಸರ್ಕಾರದ ನಿಯಮಾವಳಿ, ಆದೇಶಗಳು ಹಾಗೂ ವಿಶ್ವವಿದ್ಯಾಲಯದ ಅನುಶಾಸನ, ಪರಿನಿಯಮಾವಳಿ ಇತ್ಯಾದಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.

(3) ಪ್ರಸಕ್ತ ಶಾಶ್ವತ ಅನುದಾನರಹಿತ ಷರತ್ತಿಗೆ ಒಳಪಡಲು ದಿನಾಂಕ:09-07-2004ರಂದು ಬರೆದುಕೊಟ್ಟಿರುವ ಮಧ್ಯಂತರ ಒಪ್ಪಂದದಲ್ಲಿನ ನಿಬಂಧನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.

(4) ಸ್ಥಳೀಯ ವಿಚಾರಣಾ ಸಮಿತಿಯು ವಿಧಿಸಿರುವ ಪ್ರತಿಯೊಂದು ಷರತ್ತುಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.

4) ಎಂಟು ದಿನಗಳಲ್ಲಿ ಅಧಿಸೂಚನೆಯನ್ನು ಹೊರಡಿಸಿ ಕಳುಹಿಸಲು ಕೋರಲಾಗಿದೆ.

ತಮ್ಮ ನಂಬುಗೆಯ,

(ಸುಂದರ ರಾಜ ಗುಪ್ತ)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ).

ಪ್ರತಿ ಇವರಿಗೆ:-

(1) ಕಾಲೇಜು ಶಿಕ್ಷಣ ಆಯುಕ್ತರು/ನಿರ್ದೇಶಕರು, ಬೆಂಗಳೂರು-560 001
(2) ಕಾಲೇಜು ಶಿಕ್ಷಣ ಪ್ರಾದೇಶಿಕ ಜಂಟಿ ನಿರ್ದೇಶಕರು, ಧಾರವಾಡ-580 001
(3) ಅಧ್ಯಕ್ಷರು, ಜಾಧವಜಿ ಎಜುಕೇಷನ್ ಸೊಸೈಟಿ ಅಥಣಿ-591 304, ಬೆಳಗಾಂ ಜಿಲ್ಲೆ
(4) ಪ್ರಾಂಶುಪಾಲರು, ಜಾಧವಜಿ ಎಜುಕೇಷನ್ ಸೊಸೈಟಿಯ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಾ ವಿದ್ಯಾಲಯ, ಅಥಣಿ-591 304, (ಬೆಳಗಾಂ ಜಿಲ್ಲೆ)

Co-Ordinator
I. Q. A. C.
J.E.S's, Shri K. A. Lokapur,
Arts, Sci. & Comm. College,
Athani-591304. Dist: Belagavi.

PRINCIPAL
J. E. Society's Shri K. A. Lokapur
Arts, Science & Commerce College
ATHANI-591304. Dist: Belagavi
College Code: 4204.

Scanned with OKEN Scanner